ಸಾಗರ ಕ್ಷೇತ್ರದಲ್ಲಿ ರಕ್ಷಣಾ ಗೋಡೆಯ ದುರಸ್ತಿ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೆ, ಸಾಗರ ಪಟ್ಟಣದ ಕುಡಿಯುವ ನೀರಿನ ರಿಸರ್ವಾಯರ್‌ನ ವೇಸ್ಟ್ ಏನು ಇತ್ತು, ಆ ವೇಸ್ಟ್‌ನಿಂದ ಹೋಗತಕ್ಕ ಒಂದು ಡ್ರಾಪ್ ಚಾನೆಲ್ ಇದೆ. ಅದು ಕಳೆದ ಮಳೆಗಾಲದಲ್ಲಿ ಅದಕ್ಕೆ ಕಟ್ಟಿರತಕ್ಕ ರಕ್ಷಣಾತ್ಮಕ ಗೋಡೆ ಕುಸಿದು ಬಿದ್ದು ಇವತ್ತಿನವರೆಗೆ ದುರಸ್ತಿ ಆಗಿಲ್ಲ. ಮಳೆಗಾಲ ಬೇರೆ ಬರುತ್ತಿದೆ. ತಕ್ಷಣ ರಿಪೇರಿ ಮಾಡದೇ ಹೋದರೆ ಬಹಳ ದೊಡ್ಡ ಅನಾಹುತ ಆಗುತ್ತದೆ ಅದಕ್ಕಾಗಿ ನಮ್ಮ ಜಿಲ್ಲಾಧಿಕಾರಿಗಳು ಮತ್ತು ನಗರಾಭಿವೃದ್ಧಿ ಇಲಾಖೆಯವರು ನಮ್ಮ ಸೆಂಟ್ರಲ್ ರಿಲೀಫ್ ಫಂಡ್‌ನಿಂದ ಹಣ ಬಿಡುಗಡೆ ಮಾಡಬೇಕೆಂದು ಕಂದಾಯ ಇಲಾಖೆಗೆ ಕೇಳಿದ್ದಾರೆ. ದಯವಿಟ್ಟು ತತ್‌ಕ್ಷಣ ಕಂದಾಯ ಇಲಾಖೆಯವರು ಹಣವನ್ನು ಬಿಡುಗಡೆ ಮಾಡಿ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

12.50 ಪಿ.ಎಂ.

ಕೆರೆಗಳಲ್ಲಿನ ಹೂಳು ತೆಗೆದುಕೊಂಡು ಹೋಗುತ್ತಿರುವವರಿಗೆ ರಾಯಲ್ಟಿ ವಿಧಿಸುತ್ತಿರುವುದು.

ಶ್ರೀ ಹೆಚ್.ಬಿ. ದ್ಯಾವೀರಪ್ಪ (ಮಾಲೂರು) : ಮಾನ್ಯ ಅಧ್ಯಕ್ಷರೆ, ಇವೊತ್ತು ಸರ್ಕಾರ ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ ಕೆರೆಗಳಲ್ಲಿ ಹೂಳೆತ್ತಿಸುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ಬಹಳಷ್ಟು ಇಟ್ಟಿಗೆ ಹಾಗೂ ಹೆಂಚಿನ ಕಾರ್ಖಾನೆಗಳಿದ್ದು, ಇದರಲ್ಲಿ ಕೆಲವರು ಕೆರೆಗಳಲ್ಲಿ ಹೂಳೆತ್ತಿ ತಾವೇ ಅದನ್ನು ತೆಗೆದುಕೊಂಡು ಹೋಗುತ್ತಿರುವುದರಿಂದ ಇದಕ್ಕೆ ಸರ್ಕಾರದವರು ಟ್ಯಾಕ್ಸ್, ರಾಯಲ್ಟಿ ವಿಧಿಸುತ್ತಿರುವುದರಿಂದ ತೊಂದರೆಯಾಗುತ್ತಿದ್ದು ಇದನ್ನು ಮನ್ನಾ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಇದಕ್ಕೆ ಯಾರು ಉತ್ತರ ಹೇಳುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ಕ್ಷಮಿಸಬೇಕು. ಯಾರೋ ಒಬ್ಬ ಸದಸ್ಯರು ವಿಷಯ ಪ್ರಸ್ತಾಪಿಸುತ್ತಾರೆ, ಅದನ್ನು ಕೇಳಬೇಕು ಮತ್ತು ಉತ್ತರಿಸಬೇಕೆಂಬ ಸೌಜನ್ಯ ಸರ್ಕಾರಕ್ಕಿಲ್ಲವೇ? ಇದು ಎರಡನೆಯ ಸಲ ತಾವು ಅವರಿಗೆ ಹೇಳುತ್ತಿರುವುದು. ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮಾತನಾಡಿ ನ್ಯಾಚುರಲ್ ಕ್ಯಲಾಮಿಟಿ ಫಂಡ್‌ನಿಂದ ಕಛೇರಿಯನ್ನು ದುರಸ್ತಿ ಮಾಡಿಕೊಡುವ ಬಗ್ಗೆ ಯಾರು ಉತ್ತರ ಹೇಳುತ್ತಾರೆಂದು ಕೇಳಿದಾಗ ಕೊನೆಗೆ ಅವರು ಎದ್ದು ನಿಂತು ಉತ್ತರ ಹೇಳಿದರು. ಪ್ರತಿ ಸಾರಿಯೂ ಈ ರೀತಿ ಹೇಳಿಸಿಕೊಳ್ಳಬೇಕೇ? ಇದರ ಬಗ್ಗೆ ಗಂಭೀರತೆ ಇಲ್ಲವೆಂದರೆ ನಾವು ಸದನದಲ್ಲಿ ಏಕೆ ಸೇರಬೇಕು? ಅಲ್ಲದೆ, ಮೇಲಿಂದ ಮೇಲೆ ಎಲ್ಲರಿಗೂ ಉಪದೇಶ ಮಾಡುವುದು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಅಧ್ಯಕ್ಷರೆ, ತಾವು ಇಲ್ಲಿಯವರೆಗೆ ರಕ್ಷಣೆ ಕೊಟ್ಟಿದ್ದೀರಿ. ಅವರಿಗೆ ಹನ್ನೆರಡು ಗಂಟೆಗೆ ನೆನಪಾದರೆ ನಾವು ಹನ್ನೆರಡೂವರೆಗೆ ಉತ್ತರ ಕೊಡಬೇಕೆ? ಜೀರೋ ಅವರ್ ಎಂದರೆ ಏನು pleace let me understand that ಜೀರೋ ಅವರ್ ಎಂದರೆ ಮಾನ್ಯ ಸದಸ್ಯರುಗಳು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದಾದರೂ ಸಮಸ್ಯೆ ಇದ್ದರೆ ಅದನ್ನು ಸರ್ಕಾರದ ಗಮನಕ್ಕೆ ತರಬೇಕು, ಮತ್ತು ಅದಕ್ಕೆ ಈಗಲೇ ಉತ್ತರ ಕೊಡಬೇಕೆಂದೇನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವೇನೂ ಉತ್ತರವನ್ನು ಎಕ್ಸ್‌ಪೆಕ್ಟ್ ಮಾಡಿಲ್ಲ, ನೀವು ಅದನ್ನು ಹೇಳಬೇಕಾಗಿತ್ತು. ಅವರೇ ಎರಡು ಸಲ ಕೇಳಿದರೂ ಪ್ರತಿಕ್ರಿಯೆ ಇಲ್ಲವೆಂದರೆ ಏನರ್ಥ? ಸುಮ್ಮನೇ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

MR. SPEAKER : I will clarify the position, Hon.leader. ನಾವು ಯಾವ ತರಹ ಮಾಡಿಕೊಂಡಿದ್ದೇವೆಂದರೆ, ಜೀರೋ ಅವರ್‌ನಲ್ಲಿ ಪ್ರಸ್ತಾಪಿಸಲು ನೋಟೀಸ್ ಕೊಡುವವರು They will come and meet me in my chambers. ನೋಟೀಸ್ ಕೊಡುತ್ತಾರೆ, ನಾವು ಆ ನೋಟೀಸ್‌ಗಳನ್ನು ಸರ್ಕಾರಕ್ಕೆ ತಕ್ಷಣ ತಲುಪಿಸುತ್ತಿದ್ದೇವೆ, ಅದಕ್ಕೆ ಸರ್ಕಾರದಲ್ಲಿ ತಕ್ಷಣ ಉತ್ತರ ಇಲ್ಲವೆಂದರೆ somebody should get up and say we will get the details. ಆದುದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರ ಅಬ್ಸರ್ವೇಷನ್ ಏನೆಂದರೆ, ಒಬ್ಬ ಮಾನ್ಯ ಸದಸ್ಯರು ಒಂದು ವಿಚಾರವನ್ನು ಪ್ರಸ್ತಾಪಿಸಿದಾಗ ಸರ್ಕಾರದ ಕಡೆಯಿಂದ ಉತ್ತರಿಸಲು ಯಾರೂ ಎದ್ದು ನಿಂತುಕೊಳ್ಳುವುದಿಲ್ಲ. ಯಾರಾದರೂ ಹೇಳುತ್ತೀರಾ ಎಂದು ನಾನು ಪ್ರತಿ ಸಾರಿ ಕೇಳಬೇಕು It doesn't look nice. I think he is right.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಕೃಷಿ ಸಚಿವರಾದ ಬೈರೇಗೌಡರು ಇದಕ್ಕೆ ಉತ್ತರಿಸುವುದಾಗಿ ಹೇಳಿದ್ದರು, ಅವರು ಸದನದ ಹೊರಗಡೆ ಯಾವುದೋ ವಿಷಯ ಚರ್ಚಿಸುತ್ತಿದ್ದಾರೆ.

ಅಧ್ಯಕ್ಷರು : ಸಿದ್ಧರಾಮಯ್ಯನವರೇ ತಾವು ದಯಮಾಡಿ ತಿಳಿದುಕೊಳ್ಳಬೇಕು. ಪ್ರತಿ ಸಲವೂ ಯಾರಾದರೂ ಉತ್ತರಿಸುತ್ತೀರಾ ಎಂದು ನಾನು ನಿಮ್ಮನ್ನು ಕೇಳಿಕೊಂಡು ಉತ್ತರ ಹೇಳಿಸುವುದು ನನಗೂ ಸ್ವಲ್ಪ ಇರುಸು-ಮುರುಸು ಉಂಟಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಕೆರೆಗಳಿಂದ ಮಣ್ಣು ತೆಗೆದುಕೊಂಡು ಹೋಗಿ ಇಟ್ಟಿಗೆಗಳನ್ನು ಮಾಡಿದರೆ ಆ ಮಣ್ಣಿಗೆ ಯಾವುದೇ ಪಚೇರ್ಸ್ ಟ್ಯಾಕ್ಸ್ ಇಲ್ಲ, ಆದರೆ ಇಟ್ಟಿಗೆ ಮೇಲೆ ರಾಯಲ್ಟಿ ಇದೆ. ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನವರು ಶೇಕಡಾ ಮೂರರಷ್ಟು ರಾಯಲ್ಟಿಯನ್ನು ಇಟ್ಟಿಗೆ ಮೇಲೆ ಕಲೆಕ್ಟ್ ಮಾಡುತ್ತಿದ್ದಾರೆ. ಆದರೆ, ಮಾನ್ಯ ಸದಸ್ಯರ ಪ್ರಶ್ನೆಯೇನೆಂದರೆ, ನಾವು ಡಿ-ಸಿಲ್ಟ್ ಮಾಡುವುದಕ್ಕೆ ಹಣ ಖರ್ಚು ಮಾಡುತ್ತಿರುವುದರಿಂದ ಇದಕ್ಕೆ ರಾಯಲ್ಟಿ ವಿಧಿಸಬಾರದೆಂದು ಹೇಳುತ್ತಿದ್ದಾರೆ. ಈ ದಿಸೆಯಲ್ಲಿ ನಾನು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟಿನ ಜೊತೆ ಚರ್ಚಿಸಿ ಇದಕ್ಕೆ ಪರಿಹಾರ ಕಂಡು ಹಿಡಿದು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.